30ನೇ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೆ

ರಾಜ್ಯದಲ್ಲಿ ಖೋಟಾ ಕಾರ್ಡುಗಳನ್ನು ಪಡೆದಿರುವುದು

೧೪೫೩. ಗೋಪಾಲ ಮುಕುಂದ ಕಾಣಡೆ, (ಸಿರಸಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖೋಟಾ ಪಹಿರು ಕಾರ್ಡುಗಳನ್ನು ಪಡೆದಿರುವವರ ಸಂಖ್ಯೆ ಎಷ್ಟು?

ಈ ಬಗ್ಗೆ ಸರ್ಕಾರವು ತೆಗೆದುಕೊಳ್ಳಲಿರುವ ಕ್ರಮಗಳೇನು? ಪ್ರತಿ ಜಿಲ್ಲಾವಾರು ವಿವರವನ್ನು ಒದಗಿಸುವುದು.

ಆ) ಈ ಬಗ್ಗೆ ಎಷ್ಟು ರೇಷನ್ ಅಂಗಡಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ?

ಇ) ಇದುವರೆಗೂ ಖೋಟಾ ಕಾರ್ಡಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟದ ಪ್ರಮಾಣ ಎಷ್ಟು?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಳುಳಿ ಖೋಟಾ ಪಹಿರು ಕಾರ್ಡುಗಳನ್ನು ಪತ್ತೆ ಹಚ್ಚಲಾಗಿದೆ.

ಖೋಟಾ ಪಹಿರು ಕಾರ್ಡುಗಳನ್ನು ಪತ್ತೆ ಹಚ್ಚಿ ಅವುಗಳನ್ನು ರದ್ದುಪಟಿಸಿ, ಅಷ್ಟೇ ಪ್ರಮಾಣದಲ್ಲಿ ಅರ್ಜಿ ಕುಟುಂಬವಿರುವುದು ಕಂಡುಬಂದಲ್ಲಿ ವಿತರಿಸುವಂತೆ ಎಲ್ಲಾ ಜಿಲ್ಲಾ ಪೌಷತ್‌ಗಳಿಗೆ ತಿಳಿಸಲಾಗಿದೆ.

ಪತ್ತೆ ಹಚ್ಚಿರುವ ಖೋಟಾ ಪಹಿರು ಕಾರ್ಡುಗಳ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.

೧)	ಬಿಜಾಪುರ	೬೫
೨)	ಬಳ್ಳಾರಿ	೦೨
೩)	ಚಿಕ್ಕಮಂಗಳೂರು	೬೫
೪)	ದಕ್ಷಿಣ ಕನ್ನಡ	೧೦
೫)	ಶಿವಮೊಗ್ಗ	೪೭
೬)	ಉತ್ತರ ಕನ್ನಡ	೨೬೬
೭)	ಮೈಸೂರು	೧
	ಒಟ್ಟು	೪೪೪

ಉಳಿದ ಜಿಲ್ಲೆಗಳಲ್ಲಿ ಖೋಟಾ ಪಹಿರುಕಾರ್ಡುಗಳು ಕಂಡುಬಂದಿಲ್ಲ

ಆ) ಇಲ್ಲ.

ಇ) ಇಲ್ಲಿಯವರೆಗೂ ಪತ್ತೆ ಹಚ್ಚಲಾದ ಖೋಟಾ ಪಹಿರು ಕಾರ್ಡುಗಳಿಂದ ಸರ್ಕಾರಕ್ಕೆ ೯೪ ೫೮೦೦೦ ನಷ್ಟವಾಗಿರಬಹುದೆಂದು ಅಂದಾಜಿಸಲಾಗಿದೆ.

ಶ್ರೀ ಗೋಪಾಲ ಮುಕುಂದ ಕಾಣಡೆ.—ನಮ್ಮ ಕರ್ನಾಟಕ ರಾಜ್ಯದಲ್ಲಿ ಈಗ ಪತ್ತೆ ಮಾಡಿರುವ ಖೋಟಾ ಪಹಿರು ಕಾರ್ಡುಗಳ ಪೈಕಿ ಅರ್ಧದಷ್ಟು ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಪತ್ತೆ ಆಗಿವೆ. ಈ ಖೋಟಾ ಪಹಿರು ಕಾರ್ಡುಗಳನ್ನು ಕೊಡುವವರು ಯಾರು, ಇವು ಯಾರಿಂದ ಸಿಗುತ್ತವೆ ಮತ್ತು ಇಂತಹವರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿಸಬೇಕು? ಇದರಿಂದ ನಿಜವಾದ ಫಲಾನುಭವಿಗಳಿಗೆ ಅನ್ಯಾಯ ಮಾಡಿದಂತೆ ಆಗುವುದಿಲ್ಲವೆ? ನಮ್ಮಲ್ಲಿ ಈ ಪಹಿರು ಕಾರ್ಡುಗಳನ್ನು ಹೆಚ್ಚಾಗಿ ಶ್ರೀಮಂತರಿಗೇ ಕೊಟ್ಟಿದ್ದಾರೆ. ಅಗತ್ಯವಿರುವ ಬಡವರಿಗೆ ಕೊಟ್ಟಿಲ್ಲ. ನಮ್ಮ ಜಿಲ್ಲೆಯ ಸಿರ್ಸಿ ಮತ್ತು ಸಿದ್ದಾಪುರದಲ್ಲಿಯೇ ಹೆಚ್ಚಾಗಿ ಈ

ಪೋಟೊ ಕಾರ್ಡುಗಳನ್ನು ಕೊಟ್ಟಿದ್ದಾರೆ. ಶ್ರೀಮಂತರಿಗೆ ಹಸಿರು ಕಾರ್ಡುಗಳನ್ನು ಕೊಟ್ಟು ಬಡವರಿಗೆ ಅನ್ಯಾಯ ಮಾಡಿರುವ ಅಧಿಕಾರಿಗಳ ಬಗ್ಗೆ ಏನು ಕ್ರಮ ಕೈಕೊಳ್ಳುತ್ತೀರಿ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ಈ ಹಸಿರು ಕಾರ್ಡುಗಳನ್ನು ಬಡವರಿಗೆ ಹಂಚುವ ಕಾಲಕ್ಕೆ, ಈ ಯೋಜನೆಯ ಕೆಳಗೆ ಬರುವಂತಹ ಜನರನ್ನು ಗುರುತಿಸುವುದು ಸಾಧ್ಯವಾಗದ ಕಾರಣ ನಾವು ಐ. ಆರ್. ಡಿ. ಪಿ. ಯೋಜನೆಯ ಕೆಳಗೆ ಬರುವಂತಹ ಫಲಾನುಭವಿಗಳಿಗೆ ಈ ಹಸಿರು ಕಾರ್ಡುಗಳನ್ನು ಕೊಟ್ಟಿದ್ದರಿಂದ ಇಂತಹ ಅನೇಕ ಸಂಶಯಗಳಿಗೆ ಎಡೆಮಾಡಿಕೊಟ್ಟಿದೆ. ಆದ್ದರಿಂದ ಸರ್ಕಾರ ಈಗಾಗಲೇ ಎಲ್ಲಾ ಮಂಡಲ ಪ್ರಧಾನರಿಗೆ ಏನು ಸೂಚನೆ ಕೊಟ್ಟಿದೆ ಎಂದರೆ, ತಮ್ಮ ಮಂಡಲ - ವ್ಯಾಪ್ತಿಯಲ್ಲಿ ಯಾರು ಯಾರಿಗೆ ಈ ಹಸಿರು ಕಾರ್ಡ್ ಸಿಗದೆ ವಂಚನೆ ಆಗಿದೆ. ಅಂತಹವರ ಪಟ್ಟಿಯನ್ನು ಮತ್ತು ಯಾರು ಯಾರು ಅನಧಿಕೃತವಾಗಿ ಇಂತಹ ಕಾರ್ಡುಗಳನ್ನು ಪಡೆದಿದ್ದಾರೋ, ಅಂತಹವರ ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರಿಗೆ ಇರುವಷ್ಟೇ ಕಳಕಳಿ ನಮಗೂ ಇದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತದೆ

ಶ್ರೀ ಗೋಪಾಲ ಮುಕುಂದ ಕಾನಡೆ.—ಅವರು ಇಂತಹವರ ಪಟ್ಟಿಯನ್ನು ಕಳುಹಿಸಿ ಕೊಟ್ಟರೆ ಅದನ್ನು ತಾವು ಪೂಜೆ ಮಾಡುತ್ತೀರೋ ಅಥವಾ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರೋ ನನಗೆ ಗೊತ್ತಿಲ್ಲ. ಈ ಹಸಿರು ಕಾರ್ಡು ಪಡೆಯುವವರ ವಾರ್ಷಿಕ ವರಮಾನ ಮೂರುವರೆ ಸಾವಿರ ರೂಪಾಯಿಗಳಿರಬೇಕೆಂದು ತಾವು ಆರ್ಡರ್ ಹೊರಡಿಸಿದ ಮೇಲೆ ಅನೇಕ ಜನ ತಮ್ಮ ವಾರ್ಷಿಕ ವರಮಾನ ಎರಡೂಮುಕ್ಕಾಲು ಸಾವಿರ ಇದೆ, ಮೂರು ಸಾವಿರ ಇದೆ ಎಂದು ಸರ್ಟಿಫಿಕೇಟ್ ಪಡೆದು ತಮ್ಮ ಇಲಾಖೆಗೆ ಕೊಟ್ಟು ಹಸಿರು ಕಾರ್ಡುಗಳನ್ನು ಪಡೆದಿದ್ದಾರೆ. ಇಷ್ಟು ವರಮಾನ ಇರತಕ್ಕಂಥ ಜನರಿಗೆ ಜನತಾ ಮನೆಗಳಾಗಲೀ ಹುಡ್ಕೊ ಮನೆಗಳಾಗಲೀ ಸಿಗುವುದಿಲ್ಲ. ಆದರಲ್ಲಿ ಒಬ್ಬರಿಗೂ ಮನೆ ಸಿಕ್ಕಿಯುವುದಿಲ್ಲ. ಆದರೂ ಹಸಿರು ಕಾರ್ಡುಗಳು ಅವರು ಮನೆ ತೆಗೆಯಲ್ಲಿಕ್ಕೋ ಅಥವಾ ಮನೆಯನ್ನು ಕಟ್ಟಲಿಕ್ಕೋ ನೀವು ಕೊಟ್ಟಿದ್ದು?

೧೪-೦೦ ಎ. ಎಂ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಸದಸ್ಯರ ಅಭಿಪ್ರಾಯ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ನಿರ್ದಿಷ್ಟವಾಗಿ ಗುರುತಿಸುವುದಕ್ಕೆ ಅನೇಕ ರಾಜಕೀಯ ಒತ್ತಡಗಳು ಕೂಡ ಬಂದು, ಅವರೂ ಕೂಡ ಇಂಥವರಿಗೇ ಹಸಿರು ಕಾರ್ಡುಗಳನ್ನು ಕೊಡಬೇಕು ಎಂದು ಶಿಫಾರಸು ಮಾಡಿ ಒತ್ತಡಗಳು ಬಂದು ಕೆಲವು ಆಗಿವೆ. ವಂಚಿತರಾಗಿರತಕ್ಕವರಿಗೆ ಕೊಡಿಸುವುದನ್ನು ಸರ್ವೆ ಮಾಡಲಾಗಿ ಅದು ಪುನಃ ಹೆಚ್ಚಾಗಿದೆ ಅನಧಿಕೃತವಾಗಿ ಪಡೆಯತಕ್ಕವರ ಪಟ್ಟಿ ಇವತ್ತಿನವರೆಗೂ ಯಾವುದೇ ಮಂಡಲದಲ್ಲಿ ಬರತಕ್ಕಂಥ ಪರಿಸ್ಥಿತಿ ಇಲ್ಲ. ಆದುದರಿಂದ ಈ ಬಗ್ಗೆ ಮಾನ್ಯ ಸದಸ್ಯರ ಸಲಹೆಯನ್ನು ಗಮನಕ್ಕೆ ತೆಗೆದುಕೊಂಡು ತೀವ್ರಗತಿಯಿಂದ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ನಾವು ಪ್ರಶ್ನೆ ಕೇಳಿದಾಗೆಲ್ಲಾ ವರದಿ ತರಿಸುತ್ತೇವೆ ಎಂದು ಹೇಳುತ್ತಾರೆ ಇಲ್ಲವೇ ವಿಚಾರ ಮಾಡುತ್ತೇವೆ ಎಂದು ಹೇಳುತ್ತಾರೆ. ಈಗಲೂ ಕೂಡ ಅದನ್ನೇ ಹೇಳುತ್ತಾ ಇದ್ದಾರೆ, ಶಿವಮೊಗ್ಗ ಜಿಲ್ಲೆಯಲ್ಲಿ ೪೭ ಜನ ಸಿಕ್ಕಿದ್ದಾರೆ ಎಂದು ಹೇಳಿದ್ದಾರೆ, ನಾನು ವಿಧಾನ ಸಭೆಯಲ್ಲಿ ಹೇಳಿದ್ದೇನೆ. ಟಿಲ್ಲರ್ ಇಟ್ಟುಕೊಂಡವರಿಗೆ, ಟ್ರ್ಯಾಕ್ಟರ್ ಇಟ್ಟುಕೊಂಡವರಿಗೆ ವಂತ್ತೇ ಜೀಪು, ಕಾರು ಇಟ್ಟುಕೊಂಡವರಿಗೆ ನೀವು ಹಸಿರು ಕಾರ್ಡು ಕೊಟ್ಟಿದ್ದೀರಿ ಎಂದು ನಾನು ಪ್ರಸ್ತಾಪ ಮಾಡಿದ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುತ್ತಾ ಇದ್ದೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ನಿರ್ದಿಷ್ಟವಾಗಿ ಆಯಾ ಮಂಡಲ ಪ್ರಧಾನರಿಗೆ, ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಅನಧಿಕೃತವಾಗಿ ಹಸಿರು ಕಾರ್ಡುಗಳನ್ನು ಪಡೆದಿರತಕ್ಕವರ ಪಟ್ಟಿಯನ್ನು ಮಾನ್ಯ ಶಾಸಕರು ಕಳುಹಿಸಿದರೆ ಅವರಿಗೇ ಅಂಥದ್ದನ್ನು ರದ್ದು ಮಾಡತಕ್ಕ ಅಧಿಕಾರವನ್ನು ಕೊಟ್ಟಿದ್ದೇವೆ. ಅದರ ಬಗ್ಗೆ ಜಿಲ್ಲಾ ಪರಿಷತ್‌ನವರಿಗೆ ಕಳಿಸಿಕೊಡಲಿ, ಇಲ್ಲದೇ ಹೋದರೆ ನನಗೆ ಕಳುಹಿಸಿಕೊಟ್ಟರೂ ಸಂಬಂಧಪಟ್ಟ ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಹೇಳಿ ರದ್ದು ಪಡಿಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಬರೀ ಹಸಿರು ಕಾರ್ಡು ವಜಾಮಾಡಿದರೆ ಸಾಲದು. ಹಸಿರು ಕಾರ್ಡುಗಳನ್ನು ವಂಜಾರು ಮಾಡಿದವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ.

ಅಧ್ಯಕ್ಷರು.—ತಮಗೆ ಈಗಾಗಲೇ ಅವಕಾಶ ಕೊಟ್ಟಿದ್ದೇನೆ. ಹಸ್ತ ಕೊಟ್ಟಕೂಡಲೇ ಮುಂಗೈ ನುಂಗುತ್ತಾರಂತೆ. ಒಂದು ಸಾರಿ ಅವಕಾಶ ಕೊಟ್ಟಿದ್ದೇನೆ ತಾವು ಕುಳಿತುಕೊಳ್ಳಿ.

ಶ್ರೀ ಜೆ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ಈ ಒಂದು ಯೋಜನೆ ಮೇಲೆ ಹಸಿರು ಕಾರ್ಡುಗಳನ್ನು ಹಂಚಿದ್ದಾರೆ. ಹಂಚುವಾಗ ತುಮಕೂರು ಜಿಲ್ಲೆಯೊಳಗೆ ಬಹುಶಃ ಲೆಕ್ಕಹಾಕಿದ್ದಾರೋ ಇಲ್ಲವೊ ಗೊತ್ತಿಲ್ಲ, ಸುಮಾರು ೩೦೦೦ ಕಾರ್ಡುಗಳನ್ನು ಕೊಟ್ಟಿದ್ದಾರೆ ಎಂದು ತಿಳಿದು ಬಂತು. ಫೋಟೊ ಕಾರ್ಡ್ ಕೊಡತಕ್ಕವರು ಶಾಸಕರಲ್ಲ, ಬೇರೆ ಯಾರೂ ಅಲ್ಲ. ನಿಮ್ಮ ಅಧಿಕಾರಿಗಳೇ ಕೊಟ್ಟಿದ್ದಾರೆ. ಈ ಫೋಟೊ ಕಾರ್ಡ್ ಕೊಟ್ಟವರ ಮೇಲೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಮಾನ್ಯ ಕಾನಡಿಯವರು ಕೇಳಿದ್ದಾರೆ. ಅದಕ್ಕೆ ನಿಮ್ಮಿಂದ ಸ್ಪಷ್ಟವಾಗಿರತಕ್ಕಂಥ ಉತ್ತರ ಬರಲಿಲ್ಲ. ಮತ್ತೆ ಅರ್ಹರಾದವರ ಪಟ್ಟಿ ಕೊಡಿ ಎಂದು ಹೇಳಿದಿರಿ, ಪಟ್ಟಿ ಕೊಟ್ಟು ಸುಮಾರು ಒಂದು ವರ್ಷ ವಾಯಿತು. ಒಂದೊಂದು ಮಂಡಲ ಪಂಚಾಯಿತಿಯಲ್ಲಿ ೧೦೦-೧೫೦ ಹಸಿರು ಕಾರ್ಡುಗಳ ಬಗ್ಗೆ ಹೊಸದಾಗಿ ಪಟ್ಟಿ ಬಂದಿದೆ. ನಿಮ್ಮ ಸೆಕ್ರೆಟರಿಗಳು, ವಿಲೇಜ್ ಅಕೌಂಟಂಟ್ಸ್ ಸಿಕ್ಕಾಪಟ್ಟೆ ಕೊಟ್ಟಿದ್ದಾರೆ. ನಾವು ಹೋದರೆ ನಮಗೆ ಇದೇ ಪ್ರಶ್ನೆ. ಒಂದೊಂದು ಊರಿನಲ್ಲಿ ೧೦-೧೫, ಒಂದೊಂದು ಮಂಡಲ ಪಂಚಾಯಿತಿಯಲ್ಲಿ ೨೦೦ರ ತನಕ ಕೊಟ್ಟಿದ್ದಾರೆ. ಅಲ್ಲಿ ರೇಷನ್ ಕೊಡಲಿಕ್ಕೆ ಆಗಿಲ್ಲ, ಡಿಪೋ ನಲ್ಲೂ ಗಲಾಟೆ ಮಾಡುತ್ತಾ ಇದ್ದಾರೆ, ಗೊಂದಲವಾಗಿದೆ. ಇದನ್ನು ಸರಿಪಡಿಸಲಿಕ್ಕೆ ಏನು ಕಾರ್ಯ ಕ್ರಮ ತೆಗೆದುಕೊಳ್ಳುತ್ತೀರಿ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಸದಸ್ಯರು ಹೇಳಿದಂತೆ ೩೦೦೦ ಹಸಿರು ಕಾರ್ಡು ಗಳಲ್ಲ ಎಂದು ನನ್ನ ಅನಿಸಿಕೆ. ನಿರ್ದಿಷ್ಟವಾಗಿ ಹಸಿರು ಕಾರ್ಡುಗಳು ಎಂದು ಅವರಲ್ಲಿ ಆಧಾರ ಇದ್ದರೆ ಅದನ್ನು.....

ಶ್ರೀ ಜೆ. ಎಸ್. ಶಿವನಂಜಪ್ಪ.—ಫೋಟೊ ಕಾರ್ಡ್‌ಗಳು ೩ ಸಾವಿರಕ್ಕೆ ಮೇಲ್ಪಟ್ಟು ಸಿಕ್ಕಿವೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—೩೦೦೦ ಕಾರ್ಡುಗಳು. ಹಸಿರು ಕಾರ್ಡುಗಳು ಆಗಿರ ಲಿಕ್ಕಿಲ್ಲ. ಆದರೆ ಬೇರೆ ಪಟ್ಟಣ ಪ್ರದೇಶಗಳಲ್ಲಿ ೩೬ ಸಾವಿರ ಫೋಟೊ ಕಾರ್ಡುಗಳನ್ನು ಈಗಾಗಲೇ ಹಿಡಿದಿದ್ದೇವೆ. ನಾವು ಇದಕ್ಕೆ ಡ್ರೈವ್ ತೆಗೆದುಕೊಂಡು ಪಟ್ಟಣ ಪ್ರದೇಶಗಳಲ್ಲಿ ಬೋಗಸ್ ಕಾರ್ಡು ಗಳ ಬಗ್ಗೆ ಕ್ರಮ ತೆಗೆದುಕೊಂಡಿರುವುದನ್ನು ಈಗಾಗಲೇ ಪತ್ರಿಕೆಗಳಲ್ಲಿ ಓದಿದ್ದೀರಿ. ಆ ವ್ಯಾಪ್ತಿಯಲ್ಲಿ ೩೬ ಸಾವಿರ ಕಾರ್ಡುಗಳನ್ನು ಹಿಡಿದಿದ್ದೇವೆ. ಈ ತಿಂಗಳು ೧೫ನೇ ತಾರೀಖಿನವರೆಗೂ ಅಂಕಿಸಂಖ್ಯೆಗಳು ಬರಬೇಕಾಗಿದೆ. ಇದರ ಜೊತೆಗೆ ಕಾರ್ಡ್‌ಗಳನ್ನು ಹಿಡಿಯತಕ್ಕದ್ದು ನಮ್ಮ ವ್ಯಾಪ್ತಿಯಲ್ಲಿ ಬರಲಾರದು. ಅದು ನಮ್ಮ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವುದರಿಂದ, ಈ ಒಂದು ಡ್ರೈವ್ ತೆಗೆದುಕೊಂಡು ಯಾರು ಅನಧಿಕೃತವಾ ಹಸಿರು ಕಾರ್ಡುಗಳನ್ನು ಹೊಂದಿದ್ದಾರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ಪಟ್ಟಿ ಕಳಿಸಿಕೊಡಬೇಕು ಎಂದು ಹೇಳಿದ್ದೇವೆ. ಅಧಿಕಾರಿಗಳೇ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಪದೇ ಪದೇ ಹೇಳಿರುವುದರಿಂದ, ಅಂಥಾದ್ದನ್ನು ಅಧಿಕಾರಿಗಳೇ ಮಾಡಿರತಕ್ಕದ್ದು ಎಂದು ಏನಾದರೂ ನಮ್ಮ ಗಮನಕ್ಕೆ ಬಂದರೆ ಅವರ ಮೇಲೆ ಸರ್ಕಾರ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೆ, ಮಾನ್ಯ ಸಂಪ್ರೀಗಳು ಇಲ್ಲಿ ಕೊಟ್ಟಿರತಕ್ಕ ಉತ್ತರ ವನ್ನು ನೋಡಿದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ೨೬ಳಿ ಫೋಟೊ ಹಸಿರು ಕಾರ್ಡುಗಳು ಇವೆ ಎಂದು ತಿಳಿಸಿದ್ದಾರೆ. ಆದರೆ ಉಳಿದ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ನೋಡಿದರೆ ಬಹಳ ಕಡಿಮೆ ಇದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೊಟ್ಟಿರತಕ್ಕ ಹಸಿರು ಕಾರ್ಡ್‌ಗಳ ಬಗ್ಗೆ ನಾನು ಬಹಳ ಸಾರಿ ಹೇಳಿದ್ದೇನೆ. ಕೆಲವು ಆಡಳಿತ ಪಕ್ಷದ ಸದಸ್ಯರು.....

ಅಧ್ಯಕ್ಷರು.—ಮಾನ್ಯ ಸದಸ್ಯರು ನೇರವಾಗಿ ಸಪ್ಲಿಮೆಂಟರಿ ಪ್ರಶ್ನೆಯನ್ನು ಕೇಳಬೇಕು. ಆಡಳಿತ ಪಕ್ಷ, ಜನತಾ ಪಕ್ಷ, ಕಾಂಗ್ರೆಸ್ ಪಕ್ಷ, ಅದೆಲ್ಲಾ ಬೇಡ. ಈಗ ಸ್ವಾಮಿರಾವ್ ಮತ್ತು ಶಿವನಂಜಪ್ಪ ನವರು ಎಷ್ಟು ಚೆನ್ನಾಗಿ ಪ್ರಶ್ನೆ ಕೇಳಿದರು.

ಶ್ರೀ ಆರ್. ಎನ್. ನ್ಯಾಮಗೌಡ.—ಅಧ್ಯಕ್ಷರೆ, ಈ ಬೆರಳೂ ಸರಿಯಾಗಿ ಇರುತ್ತವೆಯೇ ? ತಮಗೆ ನಾನು ಒಳ್ಳೆಯದು ಹೇಳಬೇಕೆಂದರೆ ನನಗೆ ತಾವು ಹೇಳುವುದಕ್ಕೆ ಬಿಡುವುದಿಲ್ಲ. ಜಿಲ್ಲಾ ಪರಿಷತ್ ಚುನಾವಣೆ ಬರುವ ಪೂರ್ವದಲ್ಲಿ ಆಡಳಿತ ಪಕ್ಷದ ಎಷ್ಟೋ ಜನ ಪುಢಾರಿಗಳು ಏನು ಮಾಡಿದರೆಂದರೆ ಹಸಿರು ಕಾರ್ಡ್ ಎಲ್ಲರಿಗೂ ಕೊಡಿ ಎಂದು ಹೇಳಿದ್ದರ ಹಣೆಯಬರಹದಿಂದ ಇದಾಗಿದೆ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಉತ್ತರ ಕನ್ನಡ ಜಿಲ್ಲೆಯಲ್ಲಿರತಕ್ಕ ಫೋಟೊ ಹಸಿರು ಕಾರ್ಡ್ ೨೬ಳ್ಳ ಅಲ್ಲ, ೭೫ ಪರ್ಸೆಂಟ್ ಫೋಟೊ ಕಾರ್ಡ್ ಇವೆ. ಇನ್ನುಳಿದ ೨೫ ಪರ್ಸೆಂಟ್ ಬಡವರಿಗೆ ಸಿಕ್ಕಿರಬಹುದು. ಆದ್ದರಿಂದ ತಾವು ಹೊಸದಾಗಿ ಸರ್ವೆ ಮಾಡಿಸಿ ಫೋಟೊ ಕಾರ್ಡ್‌ಗಳನ್ನು ಅಧಿಕಾರಿಗಳು ಏನು ಕೊಟ್ಟಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಯಾವಾಗ ಪ್ರಯತ್ನ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕು.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಅಧಿಕಾರಿಗಳು ರೂಲಿಂಗ್ ಪಾರ್ಟಿಯಲ್ಲಿದ್ದಾರೆ ಎನ್ನುವುದನ್ನು ಒಪ್ಪುವುದಾದರೆ, ಐಆರ್‌ಡಿಪಿ ಪಟ್ಟಿಯನ್ನು ನಾವು ಮಾಡಿದವರಲ್ಲ. ಆವರೇ ಆ ಪಟ್ಟಿ ಮಾಡಿರುವುದು, ಅದನ್ನು ಅವರು ಮರೆತಿದ್ದಾರೆ. ಆದರಲ್ಲಿ ಬರುವಂತಹ ಫಲಾನುಭವಿಗಳ ಪಟ್ಟಿಯನ್ನು ಎರಡೂ ಕಡೆಯವರು ಸೇರಿ ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಇದನ್ನು ಬಿಟ್ಟು ಮಾನ್ಯ ಸದಸ್ಯರು ಬೇರೆ ಯಾವ ರೀತಿ ಗುರುತಿಸಬೇಕು ಎನ್ನುವ ಬಗ್ಗೆ ಏನು ಸಲಹೆ ಕೊಡುತ್ತಾರೆ ಆದನ್ನು ನಾನು ಕಾರ್ಯರೂಪಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಪ್ರಶ್ನೆ ೫೧೦ (೧೨೦೧) ಸದಸ್ಯರು ಗೈರುಹಾಜರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಪಾಟೀಲರು ನನಗೆ, ಆ ಪ್ರಶ್ನೆಯನ್ನು ಕೇಳಲಿಕ್ಕೆ ಅನುಮತಿ ಪತ್ರ ಬರೆದುಕೊಟ್ಟು ಹೋಗಿದ್ದಾರೆ. ನಾನು ಕೇಳಬಹುದು ಅಥವಾ ಚಿನ್ನಪ್ಪನವರಾದರೂ ಕೇಳಬಹುದು.

ಅಧ್ಯಕ್ಷರು.—ಹಾಗಾದರೆ ಕೇಳಿ.

ಪ್ರಶ್ನೆ ೫೧೦ (೧೨೦೧)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, 'How many tonnes of palmolein oil are being supplied to the state from April 1986 ?' ಅಧ್ಯಕ್ಷರೆ, ಇದರಲ್ಲಿ ಅನೆಕ್ಸ್‌ಚರ್ ಇಲ್ಲ, ಉತ್ತರ ಕೊಟ್ಟಿದ್ದಾರೆ ಆದ್ದರಿಂದ, ಮಾನ್ಯ ಅಧ್ಯಕ್ಷರು ಈ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನಲ್ಲಿ ಈಗ ಉತ್ತರ ಇಲ್ಲ. ನಾನು ಉತ್ತರವನ್ನು ನೋಡಿಕೊಳ್ಳಲಾರದೆ ಕೇಳಲಿಕ್ಕೆ ಬರುವುದಿಲ್ಲ. ಏಕೆಂದರೆ, ಇದರಲ್ಲಿ ಅನೆಕ್ಸ್‌ಚರ್ ಇಲ್ಲ, ಆದ್ದರಿಂದ ಇದನ್ನು ತಡೆಹಿಡಿಯಬೇಕು.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಅಧ್ಯಕ್ಷರೆ, ಇದಕ್ಕೆ ನಾನು ಮತ್ತೊಂದು ದಿವಸ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಅದನ್ನು ತಡೆಹಿಡಿಯಲಾಗಿದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ರಾಜ್ಯದಲ್ಲಿ ಕೇಂದ್ರ ಸರ್ಕಾರದವರು ಅಕ್ಕಿ ವಿತರಣೆ ಮಾಡಲು ನೀಡಿರುವ ಅಕ್ಕಿಯ ಪ್ರಮಾಣದ ಬಗ್ಗೆ.

೧೨೬೭. ಶ್ರೀ ಎನ್. ಎಂ. ಅಡ್ಯಂತಾಯ(ಸಂರತ್ನಲ್).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧ನೇ ಜನವರಿ ೧೯೮೪ರಿಂದ ಡಿಸೆಂಬರ್ ೩೧ರವರೆಗೆ ರಾಜ್ಯದಲ್ಲಿ ೨-೦೦ ರೂ. ಗೆ ಅಕ್ಕಿ ವಿತರಣೆ ಮಾಡಲು ಕೇಂದ್ರ ಸರ್ಕಾರದವರು ನೀಡಿರುವ ಅಕ್ಕಿಯ ಪ್ರಮಾಣವೆಷ್ಟು ?